ಓ ಎಸ್ ನಂ:29/2016

**ಪಿ. ಡಬ್ಲ್ಯೂ : 1**

**ದಿ: 23.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದ :**

ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಆ ಮನೆಯಲಿ ವಾಸ ಇದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡು ಅದು ನನ್ನ ಹೆಂಡತಿಯ ಮನೆ ಇರುತ್ತದೆ ಎಂದು ಸಾಕ್ಷಿ ಹೇಳಿದ್ದರಿಂದ ಅದನ್ನು **ನಿ ಡಿ 1 ಎಂದು,** ಸಾಕ್ಷಿಗೆ ಇನ್ನೊಂದು ಪೋಟೋವನ್ನು ತೋರಿಸಿ ಅದರಲ್ಲಿ ಪ್ರತಿವಾದಿಗಳು ವಾಸವಿದ್ದಾರೆ ಎಂದರೆ ಸಾಕ್ಷಿ ಹೌದು ವಾಸವಿದ್ದಾರೆ, ಅದನ್ನು ನಾವೇ ಕಟ್ಟಿಸಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ **ಪೋಟೋವನ್ನು ನಿ ಡಿ 2 ಎಂದು ಗುರುತಿಸಲಾಯಿತು. ಸಿ ಡಿ ಯನ್ನು ಕೊಟ್ಟಿದ್ದು ಅದನ್ನು ನಿ ಡಿ 3 ಎಂದು ಗುರುತಿಸಲಾಯಿತು.**

ತಟ್ಟೇಕೆರೆಯಲ್ಲಿ ಇರುವ ನಿ ಡಿ 2 ರ ಮನೆಯನ್ನು 4 ವರ್ಷಗಳಾಗಿವೆ. ಸದರಿ ಮನೆಯನ್ನು ಪ್ರತಿವಾದಿಗಳು ಕಟ್ಟಿಸಿದ್ದಾರೆ ಎಂದರೆ ಸರಿ. ಆದರೆ ಜಮೀನನ್ನು ಮಾರಿ ಕಟ್ಟಿಸಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ಬಗ್ಗೆ ಯಾವುದೆ ದಾಖಲೆಯನ್ನು ನಾನು ಕೊಟ್ಟಿಲ್ಲ. ಸದರಿ ನಿ ಡಿ 1 ರಲ್ಲಿ ಇರುವ ಮನೆ ನನ್ನ ಹೆಂಡತಿಯ ಮನೆ ಎಂದು ತೋರಿಸಲು ನನ್ನ ಬಳಿ ಯಾವುದೆ ದಾಖಲೆ ಇಲ್ಲ. ವಿಭಾಗಪತ್ರದ ಪ್ರಕಾರ ರೇವಕ್ಕ ನವರಿಗೆ ಖಾತೆಯಾಗಿದೆ. ವಿಭಾಗಪತ್ರದ ಮೂಲಕ ಖಾತೆಯಾಗಿದೆ ಎಂದು ತೋರಿಸಲು ಯಾವುದೆ ದಾಖಲೆ ಕೊಟ್ಟಿಲ್ಲ. ವಿಭಾಗಪತ್ರದ ಪ್ರಕಾರ ಖಾತೆ ಮಾಡಿಕೊಳ್ಳಲು ನಂಜಮ್ಮ ಮತ್ತು ರೇವಕ್ಕ ಇವರು ಅರ್ಜಿ ಕೊಟ್ಟಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ವಿಭಾಗವಾಗಿದೆ ಎನ್ನುವ ಕಾಲಕ್ಕೆ ಎಲ್ಲ ಸ್ವತ್ತುಗಳು ನಮ್ಮ ತಂದೆಯ ಹೆಸರಿನಲ್ಲಿದ್ದವು ಎಂಬ ಪ್ರಶ್ನೆಗೆ ಸಾಕ್ಷಿ ಪಾಲನಹಳ್ಳಿಯ ಸ್ವತ್ತುಗಳು ಮಾತ್ರ ಇದ್ದವು ಎಂದು ಸಾಕ್ಷಿ ಹೇಳುತ್ತಾರೆ.

ನಮ್ಮ ತಂದೆ 15 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಎಂ ಆರ್ 5-1991-92 ರಂತೆ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲದಂತೆ ಬೋಗಸ್ ಮಾಡಿಕೊಂಡಿದ್ದಾರೆ

ಎಂದು ಸಾಕ್ಷಿ ಹೇಳುತ್ತಾರೆ. ನಾನು ಪಾಲನಹಳ್ಳಿಯಲ್ಲಿ ಜಮೀನು ಗಳನ್ನು ನೋಡಿಕೊಂಡು ವ್ಯವಹಾರ ಮಾಡುತ್ತಿದ್ದರಿಂದಲೇ ಖಾತೆಯಾಗಿದೆ ಎಂದರೆ ಸರಿಯಲ್ಲ. ಆ ಸ್ವತ್ತು ನಮ್ಮ ದೊಡ್ಡಮ್ಮನ ಸ್ವತ್ತಾಗಿತ್ತು, ನನ್ನ ಹೆಂಡತಿ ಒತ್ತಾಯ ಮಾಡಿದ್ದರಿಂದ ಆಕೆಗೆ ದಾನಪತ್ರ ಬರೆದುಕೊಟ್ಟಿದ್ದೇನೆ ಎಂದು ಸಾಕ್ಷಿ

ಹೇಳುತ್ತಾರೆ. ನಿ ಪಿ 17 ರಲ್ಲಿ ಖಾತೆಯಾಗಿರುವುದು ಬೋಗಸ್ ಖಾತೆ ಎಂದು ಬರೆಯಿಸಿದ್ದೇನೆ. ಬೋಗಸ್ ಖಾತೆಯ ಆಧಾರದ ಮೇಲೆ ಯಾವುದೆ ನೋಂದಣಿ ಆಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಅಕ್ಕ ತಂಗಿಯರು ಬರೆದುಕೊಟ್ಟ ಹಕ್ಕು ನಿವೃತ್ತಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ನಮ್ಮ ತಂದೆಯ ಮೊದಲನೇ ಹೆಂಡತಿಯ ಮಕ್ಕಳಾದ ಶಿವರುದ್ರಯ್ಯ, ಸುವರ್ಣಮ್ಮ, ಶಿವಶಂಕರಯ್ಯ, ದಾಕ್ಷಾಣಮ್ಮ, ರುದ್ರೇಶಯ್ಯ ಮತ್ತು ಭ್ರಮರಾಂಭಿಕ ಇವರಿಗೆ ಹಕ್ಕು ನಿವೃತ್ತಿ ಪತ್ರದ ಬಗ್ಗೆ ಗೊತ್ತು, ನನಗೆ ಗೊತ್ತಿಲ್ಲ. ಅವರನ್ನು ಕರೆದುಕೊಂಡು ಬಂದು ಅದರಲ್ಲಿ ಬರೆದಿರುವ ಸ್ವತ್ತುಗಳ ಬಗ್ಗೆ ಸಾಕ್ಷಿ ಹೇಳಿಸಲು ಆಗುವುದಿಲ್ಲ, ಏಕೆಂದರೆ ಅದು ನನಗೆ ಸಂಬಂಧಿಸಿದ ಸ್ವತ್ತು ಅಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿ ಪಿ 17 ಇದನ್ನು ವಾದಿಗಳು ದಾವೆ ಹಾಕಿದ ನಂತರ ಮತ್ತು ನನ್ನ ತಮ್ಮನ ಹೆಂಡತಿ ಮತ್ತು ಮಕ್ಕಳು ದಾವೆ ಹಾಕಿದ ನಂತರ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾನಪತ್ರ ಹಾಗೂ ಹಕ್ಕು ನಿವೃತ್ತಿ ಆಗುವ ಸಂದರ್ಭದಲ್ಲಿ ನನಗೆ ಈ ದಾವೆ ಮತ್ತು ನನ್ನ ತಮ್ಮನ ಹೆಂಡತಿ ಮತ್ತು ಮಕ್ಕಳು ಹಾಕಿರುವ ದಾವೆ ಚಾಲ್ತಿಯಲ್ಲಿರುವ ವಿಷಯ ನನಗೆ ಗೊತ್ತಿತ್ತು. ತಟ್ಟೇಕೆರೆಯಲ್ಲಿ ಇರುವ ಆಸ್ತಿಗಳನ್ನು ಕಬಳಿಸಬೇಕೆಂಬ ಉದ್ದೇಶದಿಂದ ಪಾಲನಹಳ್ಳಿಯಲ್ಲಿ ಸ್ವತ್ತುಗಳು ನಂಜಮ್ಮನ ಭಾಗಕ್ಕೆ ಹೋಗಿತ್ತು ಎಂದು ವಿಭಾಗಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆ ವಿಭಾಗವಾದ ಬಗ್ಗೆ ನಮಗೆ ಯಾವುದೆ ಮಾಹಿತಿ ಇಲ್ಲ. ವಿಭಾಗಪತ್ರದಲ್ಲಿ ನನ್ನ ತಂದೆ, ರೇವಕ್ಕ ಮತ್ತು ಸಾಕ್ಷಿದಾರರ ಸಹಿಗಳು ಇರುತ್ತೇವೆಂದು ಪಾಟೀ ಸವಾಲಿನಲ್ಲಿ ಹೇಳಿಲ್ಲ. ಮುಖ್ಯ ವಿಚಾರಣೆಯಲ್ಲಿ ಅವರ ಸಹಿಗಳನ್ನು ನಾನು ಗುರುತಿಸುತ್ತೇನೆಂದು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರವನ್ನು ತಿದ್ದುಪಡಿ ಮಾಡಬೇಕೆನ್ನುವ ಉದ್ದೇಶದಿಂದ ವಿಭಾಗಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಆ ವಿಭಾಗಪತ್ರದಲ್ಲಿ ನಂಜಮ್ಮ ಇವರನ್ನು ದಾಕ್ಷಾಣಮ್ಮ ಸಾಕಿದ್ದರಿಂದ ಅವರಿಗೆ ಆಸ್ತಿ ಕೊಡಬೇಕೆಂದು ಬರೆದಿರಬಹುದು, ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಪಾಲನಹಳ್ಳಿಯ ಸ್ವತ್ತುಗಳು ನನ್ನ ಹೆಂಡತಿಗೆ ಸಿಗಬೇಕೆಂಬ ಉದ್ದೇಶದಿಂದ ವಿಭಾಗಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ವಿಭಾಗಪತ್ರ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಿಭಾಗಪತ್ರದ ಬಗ್ಗೆ ಯಾರಿಗೆ ಮಾಹಿತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ವಿಭಾಗಪತ್ರದ ವಿಷಯವನ್ನು ನಾನು ಬರೆಸಿಲ್ಲ. ಪ್ರತಿವಾದಿಗಳಿಗೆ ಪಾಲನಹಳ್ಳಿ ಮತ್ತು ತಟ್ಟೇಕೆರೆ ಆಸ್ತಿಗಳಲ್ಲಿ ಭಾಗ ಇದೆ ಎಂದರೆ ಸರಿಯಲ್ಲ, ತಟ್ಟೇಕೆರೆಯ ಆಸ್ತಿಗಳನ್ನು ಪೂರ್ತಿ ನನಗೆ ಸೇರಬೇಕೆಂದು ಹೆಂಡತಿಯ ಹೆಸರಿಗೆ ಖಾತೆ ಮಾಡಿಸಿ ಪಾಲನಹಳ್ಳಿ ಸ್ವತ್ತುಗಳಿಗೆ ಮಾತ್ರ ದಾವೆ

ಮಾಡಿದ್ದೇನೆ ಎಂದರೆ ಸರಿಯಲ್ಲ. ಪಾಲನಹಳ್ಳಿಯಲ್ಲಿರುವ ಹಳೆಯ ಮನೆಯಲ್ಲಿ ನಂಜಮ್ಮ ಮತ್ತು ರೇವಕ್ಕ ವಾಸವಾಗಿದ್ದರು ಎಂದರೆ ಸರಿಯಲ್ಲ. ನಂಜಮ್ಮ ಮಾತ್ರ ವಾಸವಾಗಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಎಲ್ಲ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿಯಲ್ಲ. ಅದರಲ್ಲಿ ಯಾವುದೆ ವಿಭಾಗಪತ್ರ ಆಗಿಲ್ಲ ಎಂದರೆ ಸರಿಯಲ್ಲ. ನಂಜಮ್ಮ ಅಥವಾ ರೇವಣ್ಣ ಇವರು ಪಾಲನಹಳ್ಳಿಯ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೆ ನೋಂದಾಯಿತ ದಾಖಲೆಗಳನ್ನು ಬರೆದುಕೊಟ್ಟಿಲ್ಲ ಎಂದರೆ . ಸರಿಯಲ್ಲ. ರೇವಕ್ಕನಿಗೆ ನೋಂದಾಯಿತ ದಾಖಲೆ ಮೂಲಕ ಆಸ್ತಿ ಬಿಟ್ಟುಕೊಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ದಾಖಲೆಯನ್ನು ರೇವಣ್ಣ ಇವರು ರೇವಕ್ಕನಿಗೆ ಬರೆದುಕೊಟ್ಟಿದ್ದಾರೆ. ಅದು ಕ್ರಯಪತ್ರ ಇರುತ್ತದೆ. ಅದನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಿ ಪಿ 2 ಆ ದಾಖಲೆ ಇರುತ್ತದೆ.

ನಿ ಪಿ 2 ನ್ನು ರೇವಣ್ಣ ಇವರು ನನ್ನ ತಾಯಿ ರೇವಕ್ಕ ಇವರ ಹೆಸರಿನಲ್ಲಿ ಕ್ರಯಕ್ಕೆ ತೆಗೆದುಕೊಂಡು ಪತ್ರವನ್ನು ಅವರ ಹೆಸರಿನಲ್ಲಿ ಬರೆಯಿಸಿದ್ದಾರೆ. ಆ ರೀತಿ ಆ ಪತ್ರದಲ್ಲಿ ಒಕ್ಕಣೆ ಇಲ್ಲ ಎಂದರೆ ಸರಿಯಲ್ಲ. ನಂಜಮ್ಮನಿಗೆ ಗಂಗಮ್ಮ ಮತ್ತು ಹೊನ್ನಮ್ಮ ಎನ್ನುವ ಮಕ್ಕಳಿದ್ದರು ಎಂದರೆ ಸರಿ. ಹೊನ್ನಮ್ಮ ನಂಜಮ್ಮನ 2 ನೆ ಮಗಳೆಂದರೆ ಸರಿ, ಅವರಿಗೆ ಮದುವೆಯಾಗಿರಲಿಲ್ಲ ಮತ್ತು ಮಕ್ಕಳಿರಲಿಲ್ಲ. ಅವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಹೊನ್ನಮ್ಮನಿಗೆ ಮದುವೆಯಾಗಿತ್ತು ಎಂದರೆ ಸರಿಯಲ್ಲ. ಅವರಿಗೆ ಇಬ್ಬರು ಮಕ್ಕಳಿದ್ದರು ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಮರೆಮಾಚಿ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 1

ನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಂಜಮ್ಮನ ಹೆಸರನ್ನು ನಿ ಪಿ 1 ರಲ್ಲಿ ಬರೆಸಿಲ್ಲ, ಅದು ನನ್ನ ತಾಯಿಯ ಕುಟುಂಬದ ವಂಶವೃಕ್ಷ ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ನಂಜಮ್ಮ ಇವರು ರೇವಣ್ಣ ಇವರ ಹೆಂಡತಿ ಇರುವುದರಿಂದ ಅವರ ವಂಶವೃಕ್ಷದಲ್ಲಿಯೇ ಬರುತ್ತಾರೆ ಎಂದರೆ ಸರಿಯಲ್ಲ. ಪಾಲನಹಳ್ಳಿಯ ಪೂರ್ಣ ಆಸ್ತಿಯನ್ನು ಹೊಡೆದುಕೊಳ್ಳಬೇಕು ಮತ್ತು ತಟ್ಟೇಕೆರೆ ಆಸ್ತಿಯಲ್ಲಿ ಭಾಗ ತೆಗೆದುಕೊಳ್ಳಬೇಕೆಂಬ ಕಾರಣಕ್ಕೆ ಸುಳ್ಳು ವಂಶವೃಕ್ಷ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ದಾಖಲೆಗಳನ್ನು ಕೊಟ್ಟು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವುದೆ ಭಾಗ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.